ಅವರ ಸಾಹಿತ್ಯದಲ್ಲಿ ಅಂಚಿಗೆ ಸರಿದ ಅಧೋಲೋಕದ ಧ್ವನಿಯಿದೆ. ಈ ಲೋಕದ ಸಂಕಟಗಳೆ ಬರಹವಾದವು.

ಚೆನ್ನಣ್ಣ ವಾಲೀಕಾರರ ಬಳಿ ಒಂದು ಜನಪದ ವಾದ್ಯವಿತ್ತು. ಅದು ಡಪ್ಪು. ವಿಭಾಗದ ತಮ್ಮ ಕೊಠಡಿಯಲ್ಲಿ ಸಂಜೆ ಡಪ್ಪು ಬಾರಿಸುತ್ತ ಹಾಡು ಹೇಳುತ್ತಿದ್ದರು. ಕೆಲವೊಮ್ಮೆ ಅವರೊಬ್ಬರೇ ಹಾಡುತ್ತ ಕೂತಿರುತ್ತಿದ್ದರು. ಮತ್ತೆ ಕೆಲವೊಮ್ಮೆ ವಿದ್ಯಾರ್ಥಿಗಳ ಸಣ್ಣ ಗುಂಪು ಅವರ ಸುತ್ತ ನೆರೆದಿರುತ್ತಿತ್ತು. ಡಪ್ಪಿನಾಟ ಅವರಿಗೆ ಕರಗತವಾಗಿತ್ತು. ಒಮ್ಮೊಮ್ಮೆ ಬಯಲಾಟದ ಕೆಲ ಪಾತ್ರಗಳನ್ನು ತರಗತಿಯಲ್ಲಿ ಮಾಡಿ ತೋರಿಸುತ್ತಿದ್ದರು. ಹೀಗಾಗಿ ಅವರ ಪಾಠಗಳೆಂದರೆ ಹಾಡು, ನೃತ್ಯ, ಅಭಿನಯ ಎಲ್ಲದರ ಸಂಗಮ. ಅದೊಂದು ರೀತಿಯಲ್ಲಿ ರಂಗಭೂಮಿ. ಆಧುನಿಕ ಡಪ್ಪಿನಾಟ ಮತ್ತು ಡೊಳ್ಳಿನ ಹಾಡುಗಳನ್ನು ಬರೆದರು. ಜನಪದ ದ್ರವ್ಯವನ್ನು ಹೊಸ ಕಾಲಕ್ಕಾಗಿ ಬಳಸಿಕೊಳ್ಳುವ ಪ್ರಯತ್ನಗಳು ಅವರ ಕಾವ್ಯದಲ್ಲಿವೆ. ಕೋಲಾಟದ ಹಾಡುಗಳು, ಗೀಗೀ ಪದಗಳು, ಬಯಲಾಟದ ಹಿಮ್ಮೇಳ ಮತ್ತು ಮುಮ್ಮೇಳದ ಹಾಡುಗಳು, ಹೀಗೆ ಜನಪದ ಕಾವ್ಯದ ಮೂಲಕ ಹೊಸ ಶೋಧ ನಡೆಸಿದರು. ಸತ್ತಾಗ ಹಾಡುವ ಪದಗಳನ್ನು ಹೊಸ ಸಂದರ್ಭ ಮತ್ತು ವ್ಯಕ್ತಿಗಳಿಗಾಗಿ ಬಳಸಿಕೊಂಡರು.

ಬಂಡಾಯದ ಬಹುತೇಕ ಕವಿಗಳಲ್ಲಿ ಕಾಣದ ಆರ್ದ್ರತೆ ವಾಲೀಕಾರರ ಕವಿತೆಗಳಲ್ಲಿತ್ತು. ಇದೊಂದು ತರಹದಲ್ಲಿ ವೈಚಾರಿಕ ಆರ್ದ್ರತೆ. ಇವರ ಸಮಕಾಲೀನ ಬೇರೆ ಕವಿಗಳಲ್ಲಿ ಕಂಡುಬರುತ್ತಿದ್ದ ಶುಷ್ಕ ವೈಚಾರಿಕತೆಗೆ ಇವರ ಕಾವ್ಯ ಹೊರತಾಗಿತ್ತು. 'ಬಾಬಾಸಾಹೇಬ ಅಂಬೇಡ್ಕರರಿಗೆ' ಎಂಬ ಪದ್ಯ ಗಮನಿಸಿ. ಇಡೀ ಕವಿತೆಯ ಆರ್ದ್ರವಾದ ತಣ್ಣನೆಯ ದನಿ ಮನಸ್ಸನ್ನು ಇರಿಯುತ್ತದೆ. ಮಹಾನ್ ನಾಯಕನ ನಿರ್ಗಮನದ ತರುವಾಯ ಸಾಮಾಜಿಕ ನ್ಯಾಯದ ರಥ ಯಾರು ಮುಂದೊಯ್ಯುವರು ಎಂಬ ಅಸಹಾಯಕತೆ, ಜೊತೆಗೆ ಹೊಸ ತಲೆಮಾರು ಈ ಜವಾಬ್ದಾರಿ ಹೊತ್ತುಕೊಳ್ಳಬೇಕೆಂಬ ಆಶಯ – ಎರಡನ್ನೂ ಒಟ್ಟಿಗೆ ಕವಿತೆ ಧ್ವನಿಸಿತ್ತು; ಬಾಬಾಸಾಹೇಬರು ಹೋದಮೇಲೆ ಬಡವರ ಬದುಕು ಮತ್ತೆ ಮೊದಲಿನಂತೆಯೇ ಆಗಿರುವುದನ್ನು ಸಂಕಟದಿಂದ ತೋಡಿಕೊಂಡಿತ್ತು. ಅವರಂತೆ ಕಳಕಳಿಯಿಂದ ದುಡಿಯುವವರು ಯಾಕೆ ಬರುತ್ತಿಲ್ಲ? ಎಂಬ ಪ್ರಶ್ನೆಯೂ ಕವಿಯನ್ನು ಕಾಡಿದೆ. ಅವರ ಅನುಪಸ್ಥಿತಿಯಿಂದ ಆದ ಅನಾಹುತಗಳನ್ನು ಪದ್ಯ ಮಂಡಿಸಿದೆ. ಮೇಲಿನವರ ಆಟಗಳು ಮತ್ತೆ ಶುರುವಾಗಿವೆ. ಬೂಟುಗಾಲುಗಳು ಸದ್ದು ಮಾಡುತ್ತಿವೆ. ತಮ್ಮ ಮಾತು ಕೇಳದೆ ಇದ್ದರೆ ತಲೆಕಡಿದು ಹಾಕುವವರ ಕ್ರೌರ್ಯ ಮುಂದುವರೆದಿದೆ. ಸಮುದಾಯಗಳು ಮತ್ತೆ ತಬ್ಬಲಿತನದಿಂದ ನರಳಿವೆ. ಇದರ ಜೊತೆಗೆ ಈ ಕತ್ತಲೆಯನ್ನು ಸೀಳಿ ಬರುವ ಬೆಳಕಿನ ಬಗೆಗೂ ಭರವಸೆಯಿದೆ. ಬಾಬಾಸಾಹೇಬರ ಗೈರುಹಾಜರಿಯನ್ನು ಇಷ್ಟು ಆರ್ದ್ರವಾಗಿ ಮಂಡಿಸಿದ ಇನ್ನೊಂದು ಕವಿತೆ ಕನ್ನಡದೊಳಗಿಲ್ಲ. ದಲಿತ ಸಂಘರ್ಷ ಸಮಿತಿ ಈ ಹಾಡನ್ನು ಹಳ್ಳಿಹಳ್ಳಿಗಳಿಗೆ ತೆಗೆದುಕೊಂಡು ಹೋಗಿತ್ತು.

'ನೀ ಹೋದ ಮರುದಿನ ಮೊದಲಂಗ
ನಮಬದುಕು ಆಗ್ಯಾದೊ ಬಾಬಾಸಾಹೇಬ
ನಿನ್ನಂಗ ದುಡಿವವರು ಕಳಕಳಿಯ ಪಡುವವರು
ಇನ್ನೂತನ ಬರಲಿಲ್ಲ ಒಬ್ಬ'

ವಾಲೀಕಾರರು ವಿಭಾಗದ ಹಲವಾರು ಸಭೆಸಮಾರಂಭಗಳಲ್ಲಿ ಈ ಹಾಡನ್ನು ಆರ್ತವಾಗಿ ಹಾಡುತ್ತಿದ್ದರು. ಅವರ ಉದ್ದನೆಯ ಕೂದಲು, ಕೆಂಪು ಅಂಗಿ, ಸ್ವಲ್ಪ ಗಡುಸಾದ ದನಿ, ಜನರೆಡೆಗೆ ಕೈಮಾಡಿ ಹಾಡುತ್ತಿದ್ದ ರೀತಿ, ಒಂಥರದ ಅಸಹಾಯಕತೆ – ಎಲ್ಲವೂ ಸೇರಿ ಕೇಳುಗರ ಎದೆ ಕಂಪಿಸುವಂತೆ ಮಾಡುತ್ತಿತ್ತು. ಶುಷ್ಕ ವೈಚಾರಿಕತೆಯನ್ನು ಮೀರುವ ಕಾವ್ಯಧಾಟಿಗಳನ್ನು ಅವರು ಗಂಭೀರವಾಗಿ ಬಳಸಿಕೊಂಡಿದ್ದರು. ಅವರ ಕಾವ್ಯ ಸಂಪೂರ್ಣವಾಗಿ ಅಧೋಲೋಕದ ಕಡೆ ಮುಖಮಾಡಿತ್ತು. ಅಲ್ಲಿ ಮಾದರ ಸಾಬವ್ವಳ ಗೋರಿ ಪದವಿದೆ, ಮಲ್ಲಮ್ಮನ ಕೋಲಾಟದ ಪದವಿದೆ, ಕರಿತೆಲಿ ಮಾನವನ ಜೀಪದವಿದೆ, ದೇವದಾಸಿಯರ ಸಂಕಟಗಳಿವೆ, ಪ್ಯಾಂಥರ ಪದ್ಯಗಳಿವೆ. ಕಾವ್ಯಲೋಕಕ್ಕೆ ಇವರೆಲ್ಲ ಪ್ರವೇಶಪಡೆದಿದ್ದರು. ಇವರ ಜೀವನಾನುಭವಗಳಿಲ್ಲದ ಕನ್ನಡ ಕಾವ್ಯವನ್ನು ವಾಲೀಕಾರರು ಊಹಿಸಲು ಕೂಡ ಸಾಧ್ಯವಿರಲಿಲ್ಲ. ಅವರು ಕನ್ನಡ ಕಾವ್ಯದ 'ಎಲೀಟಿಸ್ಟ್' ಆದ ಧೋರಣೆಯನ್ನು ಒಡೆದುಹಾಕಿದ್ದರು. ವಸ್ತು, ಆಶಯ, ಆಕಾರ ಎಲ್ಲಾ ನೆಲೆಗಳಲ್ಲಿ ಇದನ್ನು